ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ: DEPARTMENT / SUBJECT: ಇತರೆ ರಾಜ್ಯಗಳ ವಾರ್ತೆ

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯ ಕರ್ನಾಟಕ ದಿನಾಂಕ : DATE : 11/07/2019

# ರಿವಾಲ್ವರ್ ಹಿಡಿದು ಡ್ಯಾನ್ಸ್ ಮಾಡಿದ ಬಿಜೆಪಿ ಶಾಸಕ!



**ಡೆಹ್ರಾಡೂನ್:** ಅಮಾನತುಗೊಂಡಿರುವ ಉತ್ತರಾಖಂಡದ ಬಿಜೆಪಿ ಶಾಸಕ ಕುನ್ವರ್ ಪ್ರಣವ್ ಸಿಂಗ್ ಬಾಯಲ್ಲಿ ಒಂದು ಹಾಗೂ ಕೈಗಳಲ್ಲಿ ಎರಡು ರಿವಾಲ್ವರ್ ಹಿಡಿದು ಪೆಗ್ಗು ಹಾಕುತ್ತಾ ಬಾಲಿವುಡ್ ಹಾಡಿಗೆ ಕುಣಿದ ವಿಡಿಯೊ ವೈರಲ್ ಆಗಿದ್ದು, ಅವರ ಈ ವರ್ತನೆಯನ್ನು ಬಿಜೆಪಿ ತೀವ್ರವಾಗಿ ಖಂಡಿಸಿದೆ. ಇಂತಹ ಹುಚ್ಚಾಟಗಳಿಗೆ ಅವಕಾಶ ನೀಡುವುದಿಲ್ಲ ಎಂದಿರುವ ಬಿಜೆಪಿ, ಸಿಂಗ್ ಅವರನ್ನು ಪಕ್ಷದಿಂದ ವಜಾಗೊಳಿಸುವ ಬಗ್ಗೆ ಚಿಂತನೆ ನಡೆಸಿದೆ.

ಪತ್ರಕರ್ತರೊಬ್ಬರನ್ನು ಬೆದರಿಸಿದ ಪ್ರಕರಣದ ನಂತರ ಬಿಜೆಪಿ, ಉತ್ತರಾಖಂಡದ ಕಾನ್ಪುರ ಕ್ಷೇತ್ರದ ಶಾಸಕ ಪ್ರಣವ್ ಸಿಂಗ್ ಅವರನ್ನು ಜುಲೈನಲ್ಲಿ ಮೂರು ತಿಂಗಳ ಅವಧಿಗೆ ಅಮಾನತುಗೊಳಿಸಿದೆ. ಈಗ ಅವರನ್ನು ಪಕ್ಷದಿಂದ ಕಿತ್ತುಹಾಕಲು ಮುಂದಾಗಿದೆ.

ಮನೆಯಲ್ಲಿ ಮಿತ್ರರ ಜತೆ ಪಾರ್ಟಿ ಮಾಡುತ್ತಿದ್ದ ವೇಳೆ ಪ್ರಣವ್ ಸಿಂಗ್ ಮೊದಲು ಬಾಯಲ್ಲಿ ಒಂದು ಹಾಗೂ ಎರಡೂ ಕೈಗಳಲ್ಲಿ ಒಂದೊಂದು ರಿವಾಲ್ವರ್ ಹಿಡಿದು, ನಂತರ ಒಂದು ಕೈಯಲ್ಲಿ ರಿವಾಲ್ವರ್ ಮತ್ತೊಂದು ಕೈಯಲ್ಲಿ ರೈಫಲ್ ಹಿಡಿದು ಡ್ಯಾನ್ಸ್ ಮಾಡಿದ 45 ಸೆಕೆಂಡ್‌ಗಳ ವಿಡಿಯೊ ಬುಧವಾರ ಜಾಲತಾಣಗಳಲ್ಲಿ ಸದ್ದು ಮಾಡಿದೆ. ಅವರ ಬಳಿ ಇರುವ ಬಂದೂಕು ಹಾಗೂ ಪಿಸ್ತೂಲ್‌ಗಳು ಪರವಾನಗಿ ಹೊಂದಿದವೇ ಎಂಬ ಬಗ್ಗೆ ಪೊಲೀಸರು ಪರಿಶೀಲನೆ ನಡೆಸುತ್ತಿದ್ದಾರೆ.

**ಸಮರ್ಥನೆ:** ಪರವಾನಗಿ ಹೊಂದಿರುವ ರಿವಾಲ್ವರ್, ರೈಫಲ್ ಹೊಂದುವುದು ಹಾಗೂ ಮದ್ಯ ಸೇವಿಸುವುದು ಅಪರಾಧವೇನು? ಎಂದು ಪ್ರಶ್ನಿಸಿರುವ ಪ್ರಣವ್ ಸಿಂಗ್, "ನನ್ನ ಬಳಿ ಇದ್ದ ರಿವಾಲ್ವರ್‌ಗಳು ಲೋಡ್ ಆಗಿರಲಿಲ್ಲ. ಅದರಲ್ಲೂ ನಾನು ಯಾರನ್ನೂ ಬೆದರಿಸಿಯೂ ಇಲ್ಲ," ಎಂದು ತಮ್ಮ ನಡೆಯನ್ನು ಸಮರ್ಥಿಸಿಕೊಂಡಿದ್ದಾರೆ.